**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 9777/2021

ಸಿ.ಡಬ್ಲ್ಯೂ-9 ಪಿ.ಡಬ್ಲ್ಯೂ-5

| | | |
|---|---|---|
| ಹೆಸರು | ಃ | ರಂಜಿತಾ |
| ತಂದೆಃಗಂಡ | ಃ | ದಶರಥ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | ಃ | ಕೆರಿಅಂಬಲಗಾ |

ದಿನಾಂಕಃ30.11.2024

**ಸತ್ಯ ಪ್ರತಿಜ್ಞೆಯ ಮೇರೆಗೆ_**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 8 ಪರಿಚಯ ಇರುತ್ತಾರೆ. 2021 ನೇ ಇಸವಿಯನಮ್ಮ ಪಕ್ಕದ ಮನೆಯವರಾದ ಚಾಸಾ-5, 6, 8 ರವರ ಮನೆಗೆ ಆರೋಪಿತರು ಹೆಣ್ಣು ಕೇಳಲು ಬಂದಿರುತ್ತಾರೆ. ಜಗಳ ಆದ ಕಾರಣ ನಾನು ಅವರ ಮನೆಗೆ ಹೋಗಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.14.08.2021 ರಂದು ಆರೊಪಿತರು ಸುಮಾರು 12.30 ಗಂಟೆಗೆ ಚಾಸಾ-5 ರವರ ಮನೆಯ ಮುಂದೆ ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ-1, 4, 6 ರವರು ಇದ್ದರು ಎಂದರೆ ಸರಿ. ಆ ಸಮಯದಲ್ಲಿ 1ನೇ ಆರೋಪಿ ರಂಡಿ ಮಕ್ಕಳೇ ಬೋಸಡಿ ಮಕ್ಕಳೆ ಎಂದು ಅವಾಚ್ಯ ವಾಗಿ ಬೈದು ನಿಮ್ಮನ್ನು ಖಲಾಸ ಮಾಡುತ್ತೇನೆ ಎಂದು ಹೇಳಿ ಚಾಸಾ-1 ರವರ ಕೈಗೆ ಚಾಕುವಿನಿಂದ ಹೊಡೆದಿರುತ್ತಾನೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-5 ರವರು ಬಿಡಿಸಲು ಹೋದಾಗ 2ನೇ ಆ ರೋಪಿ ಕೈಯಿಂದ ತಲೆಯ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ ಮತ್ತು 1ನೇ ಆರೋಪಿ ಚಾಸಾ-4 ರವರಿಗೆ ಚಪ್ಪಲಿಯಿಂದ ಹೊಡೆದಿರುತ್ತಾನೆ ಎಂದರೆ ಸರಿ. 3ನೇ ಅರೋಪಿ ಚಾಸಾ-6 ರವರಿಗೆ ಕೈಯಿಂದ ಬೆನ್ನ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ ಆಗ ನಾನು ಮತ್ತು ಚಾಸಾ-7 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ಸಾಕ್ಷಿ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ದಿ.17.08.2021 ರಂದು ಕೆರಿಅಂಬಲಗಾ ಗ್ರಾಮದಲ್ಲಿ ಪೋಲಿಸರಿಗೆ ಹೇಳಿಕೆ ನಿಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ನನಗೆ ಸಾಕ್ಷಿ ಹೇಳಲು ಸಮನ್ಸ ಬಂದಿರುವುದಿಲ್ಲ. ನನಗೆ ಚಾಸಾ-8 ರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾವು ಪಕ್ಕದ ಮನೆಯವರಾದ ಕಾರಣ ಈ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ನಾನು ಘಟನೆ ನೋಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಮೇಲೆ ಹೇಳಿದ ರೀತಿ ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿ. ನಾಯಾಲಯದಲ್ಲಿರುವ ಆರೋಪಿ ಹೆಸರು ಮತ್ತು ತಂದೆ ಹೆಸರು ಗೊತ್ತಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಅವರ ಹೆಸರು ರೋಹಿತ ಎಂದು ನುಡಿಯುತ್ತಾರೆ. ನಾನು ಶಬ್ದ ಕೇಳಿ ಅರ್ಧ ಗಂಟೆ ನಂತರ ಹೋಗಿರುತ್ತೇನೆ. ನಾನು ಹೋದಾಗ ಸಮಯ ಎಷ್ಟಾಗಿತು ಎಂದು ಗೊತ್ತಿಲ್ಲ. ನನಗೆ ಘಟನಾ ಸ್ಥಳದ ಚಕುಬಂದಿ ಹೇಳಲು ಬರುವುದಿಲ್ಲ. ಘಟನಾ ಸ್ಥಳವು ನಮ್ಮ ಮನೆಯಿಂದ ಒಂದು ಮನೆ ದಾಟಿ, ಒಂದು ಬೀದಿ ದಾಟಿ ಇರುತ್ತದೆ. ಘಟನೆ ನಡೆದಾಗ ಅಲ್ಲಿ ಕೆಲವು ಜನರು ಇದ್ದರು ಅವರ ಹೆಸರು ಹೇಳಲು ಬರುವುದಿಲ್ಲ. 1ನೇ ಆರೋಪಿ ಚಾಕುವಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದರಿಂದ ಅವರ ಬಟ್ಟೆಗೆ ಮತ್ತು ನೆಲದ ಮೇಲೆ ರಕ್ತ ಬಿದ್ದಿದ್ದನ್ನು ನಾನು ನೋಡಿರುತ್ತೇನೆ. ನಾನು ಹೋದಾಗ ಜಗಳ ಮುಗಿದಿತ್ತು. ನಾನು ಹೋಗುವಷ್ಟರಲ್ಲಿ ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ನಾನು ಚಾಸಾ-8 ರವರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-8 ರವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದು ಅವರು ನನಗೆ ಈ ರೀತಿ ಸಾಕ್ಷಿ ಹೇಳಬೇಕೆಂದು ಹೇಳಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ–** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.